ಕಾಟ್ಮಾರಯ್ಯನ ಎದೆಯನ್ನು ಮೆಲ್ಲಗೆ ನೀವಿದ. ‘ಆ ಕೆಂದೆತ್ತಿಂದು ಕೊಂಬು ಎರುಸ್ಬೇಕು ಯಾರ್ಗಾಗ್ರಾ ತಿವುದ್ರೇನ್ಗತಿ, ಮಳೆ ಬೀಳ್ತುದ್ದಂಗೇ ಹೊನ್ನಾರೂಡ್ಬೇಕು, ಕುರಿ ಕರೀಬೇಕು’. ಚಿಕ್ಬಸವ ಕಕರುಮಕರಾದ.

★★★

ಊರಿನ ದಾರಿ ಹಿಡಿದಾಗ ಮಟಮಟ ಮಧ್ಯಾಹ್ನವಾಗಿತ್ತು. ಹಿಂದಿನ ಸೀಟಿನಲ್ಲಿ ಕೂತಿದ್ದ ಕಾಟ್ಮಾರಯ್ಯ ಒಂದಷ್ಟು ಹೊತ್ತು ಅದೂ ಇದೂ ಬಡಬಡಿಸಿ, ನಂತರ ಸಣ್ಮಾದಮ್ಮನ ಭುಜಕ್ಕಾತು ನಿದ್ದೆಗೊಳಗಾದ. ‘ಮೊದ್ಲು ಮನೇನಾ ಅಚ್ಕಟ್ಟು ಮಾಡ್ಕಾಬೇಕು, ಅದುಕ್ ಮುಂಚೆ ಕರ್ಯಮ್ಮನ ಗುಡಿಗೋಗಿ ಪೂಜೆ ಮಾಡುಸ್ಬೇಕು, ತೀರ್ಥಾನಾ ಮನ್ಗೆಲ್ಲಾ ಚುಮುಕುಸ್ಬೇಕು, ತಲ್ಬಾಗ್ಲಿಗೆ ಮಳ್ಳಜ್ಜನ ಕೈಯಿಂದ ಕಟ್ಟೆ ಮಾಡಿಸ್ಕಂಡು ತಂದು ಕಟ್ಬೇಕು; ಅಲ್ಲೀಗಂಟ ಇವ್ರುನ್ನ ಗುಡೀಲೇ ಇರುಸ್ಬೇಕು’ ಕಾರು ಹೊರಡುತ್ತಿದ್ದಂತೆ ಕಾಟ್ಮಾರಯ್ಯನನ್ನು ಭುಜಕ್ಕೊರಗಿಸಿಕೊಂಡಿದ್ದ ಸಣ್ಮಾದಮ್ಮ ಆಗಾಗ ವಾಲುತ್ತಿದ್ದ ಗಂಡನ ತಲೆಯನ್ನು ಮತ್ಮತ್ತೆ ಎತ್ತಿ ಒರಗಿಸಿಕೊಳ್ಳುತ್ತಾ ಥರಾವರಿ ಆಲೋಚನೆಗಳಲ್ಲಿ ಮುಳುಗಿದಳು. ಪಟ್ಟಣದ ಗಡಿ ತಟಾಯೋ ಹೊತ್ತಿಗೆ ಕಾಟ್ಮಾರಯ್ಯ ಗೊರಕೆಗಿಕ್ಕಿಕೊಂಡಿದ್ದ.

ಕಾರು ಕರಿಯಮ್ಮನ ಗುಡಿಯೆದುರು ನಿಂತಾಗ ಸಂಜೆಯಾಗುತ್ತಿತ್ತು. ಬುಗುರಿಯ ಮರದಲ್ಲಿ ಹಕ್ಕಿಗಳ ಮಾತು ಜೋರಾಗಿತ್ತು. ಬಲಿತ ಬುಗುರಿ ಕಾಯಿಗಳ ಮೇಲೆ ಬಿದ್ದ ಮುದಿ ಬಿಸಿಲಿನಿಂದಾಗಿ, ಅವುಗಳ ಹಳದಿ ಬಣ್ಣಕ್ಕೆ ಮತ್ತೂ ರಂಗು ಬಂದಿತ್ತು. ಕೆಲ ದಿನಗಳ ಹಿಂದೆ ನಡೆದಿದ್ದ ಜಾತ್ರೆಯಿಂದಾಗಿ ಗುಡಿಯ ಅಕ್ಕ ಪಕ್ಕ ಕಸದ ರಾಶಿಯೇ ಬಿದ್ದಿತ್ತು. ಪರೇವಿನಲ್ಲಿ ಮಿಕ್ಕಿದ್ದನ್ನು ಹತ್ತಿರದಲ್ಲೆಲ್ಲೋ ಬಿಸಾಡಿದ್ದರಿಂದ ಗತನಾತ ಮೂಗಿಗಡರುತ್ತಿತ್ತು. ಗುಡಿಯ ಪಡಸಾಲೆಯಲ್ಲಿ ಕೆಲವರು ಮಲಗಿದ್ದರು. ಗುಂಪೊಂದು ಚೌಕಾಬಾರ ಆಟದಲ್ಲಿ ಮುಳುಗಿತ್ತು.

ಕಾರನ್ನು ಕಾಣುತ್ತಲೇ ಒಂದಷ್ಟು ಜನ ಅತ್ತ ಧಾವಿಸಿದರು. ಚಿಕ್ಬಸವ ಕಾರಿನಿಂದಿಳಿದು ಅವ್ವನೆಡೆಯ ಬಾಗಿಲನ್ನು ತೆಗೆದ. ಕೆಳಗಿಳಿಯುವಾಗ ಸಣ್ಮಾದಮ್ಮ ಗಂಡನ ತಲೆಯನ್ನು ಮೆಲ್ಲನೆ ತನ್ನ ಭುಜದ ಮೇಲಿಂದ ಕೆಳಕ್ಕಿಳಿಸಿ ಸೀಟಿಗೊರಗಿಸಿದಳು. ಕಾಟ್ಮಾರಯ್ಯ ಒಂಚೂರೂ ಮಿಸುಕಾಡದ್ದರಿಂದ, ‘ಅಯ್ಯೋ ಅದ್ಯಾಪಟಿ ನಿದ್ದೇಂತೀನಿ ಏಳು ಊರ್ಬಂತು’ ಎಂದು ಸಣ್ಮಾದಮ್ಮ ಕಾಟ್ಮಾರಯ್ಯನನ್ನು ಅಲುಗಿಸಿದಳು. ಇದ್ದಕ್ಕಿದ್ದಂತೆ ಕಾಟ್ಮಾರಯ್ಯನ ತಲೆ ಒಂದೆಡೆ ವಾಲಿತು. ಗಾಬರಿಗೊಂಡ ಸಣ್ಮಾದಮ್ಮ, ‘ಲೇ ಮಗಾ’ ಅಂತ ಒಂದೇಟಿಗೇ ಇದ್ದಬದ್ದ ಬಿರುವನ್ನೆಲ್ಲಾ ಬಿಟ್ಟು ಚಿಕ್ಬಸವನನ್ನು ಕೂಗಿಕೊಂಡಳು. ಚಿಕ್ಬಸವ ನಿಂತಲ್ಲೇ ನಡುಗಿದ. ಸಣ್ಮಾದಮ್ಮನ ಕೂಗಾಟಕ್ಕೆ ಮತ್ತೊಂದಷ್ಟು ಜನ ಅತ್ತ ದೌಡಾಯಿಸಿದರು. ಅವರುಗಳನ್ನು ವಾರೆಮಾಡಿಕೊಂಡು ಬಂದ ಕಾಟ್ಮಾರಯ್ಯನ ಅಣ್ಣ ಕಂಭಯ್ಯ ಸ್ವಾಧೀನವಿಲ್ಲದ ಎಡಗೈಯ್ಯನ್ನು ಊರುಗೋಲಿನ ಮೇಲೆ ಊರಿಕೊಂಡು, ಬಲಗೈಯ್ಯಿಂದ ಕಾಟ್ಮಾರಯ್ಯನ ಹಣೆಯನ್ನು ಸವರುತ್ತಾ, ‘ಲೋ ಕಾಟು, ಕಾಟಪ್ಪ’ ಅನ್ನುತ್ತಲೇ ಮೆಲ್ಲಗೆ ಮಿಸುಕಾಡತೊಡಗಿದ ಕಾಟ್ಮಾರಯ್ಯನ ಕಣ್ಣಂಚುಗಳಲ್ಲಿ ವಸರಿದ ನೀರು ಕೆನ್ನೆಗಿಳಿಯತೊಡಗಿತು.

**ಎಸ್. ಗಂಗಾಧರಯ್ಯ**

ಇಂಗ್ಲಿಷ್ ಅಧ್ಯಾಪಕ, ಕತೆಗಾರ, ಅನುವಾದಕ ಗಂಗಾಧರಯ್ಯ ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮಾಕುವಳ್ಳಿಯವರು. ‘ನವಿಲ ನೆಲ’, ‘ಒಂದು ಉದ್ದನೆಯ ನೆರಳು’, ‘ದೇವರ ಕುದುರೆ’ ಅವರ ಪ್ರಕಟಿತ ಕಥಾಸಂಗ್ರಹಗಳು. ಅನೇಕ ಕೃತಿಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಪ್ರಸ್ತುತ ತಿಪಟೂರಿನಲ್ಲಿ ವಾಸ.